ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:ಆಯವ್ಯಯ:ಸುತ್ತೋಲೆ:ಸ.ಪ್ರ.ದ.ಕ:21:2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:06.02.2021.

# ಸುತ್ತೋಲೆ

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳ ಹಿಂದಿನ ಸಾಲಿನ ಗೌರವಧನ ಬಾಕಿ ಪಾವತಿ ಕುರಿತು.

*********

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿರುವ ಅತಿಥಿ ಉಪನ್ಯಾಸಕರ ಹಿಂದಿನ ಶೈಕ್ಷಣಿಕ ಅವಧಿಯ ಗೌರವಧನ ಪಾವತಿಗೆ ಕಾಲೇಜುಗಳಿಂದ ಸ್ವೀಕೃತವಾದ ಪ್ರಸ್ತಾವನೆಯಂತೆ 2019-20 ಮತ್ತು 2020-21 ಸಾಲಿನಲ್ಲಿ ಗೌರವಧನ ಪಾವತಿಗೆ ಅನುದಾನ ಬಿಡುಗಡೆ ಮಾಡಲಾಗಿದ್ದರೂ ಸಹ ಪದೇ ಪದೇ ಬಾಕಿ ಪಾವತಿಸಲು ಪ್ರಸ್ತಾವನೆಯನ್ನು ಸಲ್ಲಿಸುತ್ತಿದ್ದು, ಆದರೆ ಪ್ರಸ್ತಾವನೆಯೊಂದಿಗೆ ಸ್ಪಷ್ಟ ವಿವರಣೆ ಹಾಗೂ ಪೂರಕ ದಾಖಲಾತಿಗಳನ್ನು ಸಲ್ಲಿಸದೇ ಇರುವುದು ಪರಿಶೀಲನೆಯಿಂದ ತಿಳಿದು ಬಂದಿರುತ್ತದೆ.

ಆದ್ದರಿಂದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸುವುದನೇಂದರೆ ಅತಿಥಿ ಉಪನ್ಯಾಸಕರುಗಳ ಹಿಂದಿನ ಶೈಕ್ಷಣಿಕ ಸಾಲಿನ ಗೌರವಧನ ಪಾವತಿಗೆ ಸಂಬಂಧಿಸಿದಂತೆ ಬಾಕಿ ಇದ್ದಲ್ಲಿ ಸದರಿ ಮಾಹಿತಿಯನ್ನು ಹಾಗೂ ಬಾಕಿ ಇಲ್ಲದಿದ್ದಲ್ಲಿ ಶೂನ್ಯ ವರದಿಯನ್ನು ನಿಗಧಿತ ನಮೂನೆಯಲ್ಲಿ ದಿನಾಂಕ:13.02.2021 ರೊಳಗಾಗಿ ಹಾರ್ಡ್ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಹಾಗೂ ಸಾಫ್ಟ್ ಪ್ರತಿಯನ್ನು ಇ-ಮೇಲ್ ವಿಳಾಸ:**dcegfbudget@gmail.com**ಗೆ ಸಲ್ಲಿಸಲು ಸೂಚಿಸಿದೆ. ಹಿಂದಿನ ಸಾಲಿನ ಬಾಕಿ ಪಾವತಿಗೆ ಪ್ರಸ್ತಾವನೆಯನ್ನು ಸಲ್ಲಿಸುವಾಗ ಸಂಬಂಧಪಟ್ಟ ಮಾಹೆಯ ಇ.ಎಂ.ಐಎಸ್ ಪ್ರತಿ ಹಾಗೂ ಬಾಕಿ ಉಳಿಯಲು ಕಾರಣಕ್ಕೆ ಸ್ಪಷ್ಟ ವಿವರಣೆಯನ್ನು ನಮೂನೆ-(1) ರ ಷರಾ ಕಾಲಂನಲ್ಲಿ ತಪ್ಪದೇ ನಮೂದಿಸುವುದು ಹಾಗೂ ಅನುಮೋದನೆಗೆ ಬಾಕಿ ಇರುವ ಅತಿಥಿ ಉಪನ್ಯಾಸಕರ ವಿವರವನ್ನು ಸಹ ಸ್ಪಷ್ಟ ವಿವರಣೆಯೊಂದಿಗೆ ನಮೂನೆ-(2)ರಲ್ಲಿ ತಪ್ಪದೇ ಸಲ್ಲಿಸಲು ಸೂಚಿಸಿದ್ದು, ಒಂದು ವೇಳೆ ತಪ್ಪು ಮಾಹಿತಿ ನೀಡಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮುಂದುವರೆಸುತ್ತಾ, ಮೇಲಿನ ಕಂಡಿಕೆಯಲ್ಲಿ ತಿಳಿಸಿರುವಂತೆ ಹಿಂದಿನ ಸಾಲಿನ ಬಾಕಿ ಮಾಹಿತಿಯನ್ನು ಸಲ್ಲಿಸಲು ಅಂತಿಮ ಅವಕಾಶ ನೀಡಲಾಗಿದ್ದು, ಪ್ರಾಂಶುಪಾಲರುಗಳು ತಮ್ಮ ವೈಯಕ್ತಿಕ ಗಮನಹರಿಸಿ ಮಾಹಿತಿಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ಸೂಚಿಸುತ್ತಾ, ನಿಗಧಿತ ದಿನಾಂಕದ ನಂತರ ಸ್ವೀಕೃತವಾಗುವ ಯಾವುದೇ ಪ್ರಸ್ತಾವನೆಯನ್ನು ಪರಿಗಣಿಸುದಿಲ್ಲ, ಎಂದು ಕಟ್ಟುನಿಟ್ಟಾಗಿ ಸೂಚಿಸಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,
ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಯನ್ನು:
1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ -ಮಾಹಿತಿ ಹಾಗೂ ತಮ್ಮ ಕಛೇರಿ ವ್ಯಾಪ್ತಿಯ ಕಾಲೇಜುಗಳಿಂದ ನಿಗಧಿತ ಅವಧಿಯಲ್ಲಿ ಹಿಂದಿನ ಸಾಲಿನ ಬಾಕಿ ವಿವರ ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
2. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

ಹೊಸ ಇ-ಮೇಲ್ ಐ.ಡಿ dcegfbudget@gmail.comಗೆ ಸಲ್ಲಿಸುವುದು.

ನಮೂನೆ-1

<u>ಕಾಲೇಜಿನ ಹೆಸರು;</u>

| ಕ್ರ. ಸಂ | ಶೈಕ್ಷಣಿಕ ಸಾಲು | ಅತಿಥಿ ಉಪನ್ಯಾಸಕರ ಸಂಖ್ಯೆ | ಗೌರವಧನದ ಅವಧಿ | ಗೌರವಧನದ ಮೊತ್ತ | ಬಾಕಿ ಪಾವತಿಯ ವಿವರಣೆ | ಷರಾ |
|---|---|---|---|---|---|---|
| | | | | | | |

ಮೇಲೆ ನೀಡಿರುವ ಮಾಹಿತಿಯು ಸರಿ ಇದೆ ಎಂದು ಈ ಮೂಲಕ ದೃಡೀಕರಿಸಿದೆ.

ಸಹಿ/-
ಪ್ರಾಂಶುಪಾಲರು

---

ನಮೂನೆ-2

<u>ಕಾಲೇಜಿನ ಹೆಸರು;</u>

ಹಿಂದಿನ ಶೈಕ್ಷಣಿಕ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿ ಅನುಮೋದನೆಗೆ ಬಾಕಿ ಇರುವ

| ಕ್ರ. ಸಂ. | ಶೈಕ್ಷಣಿಕ ಸಾಲು | ಅತಿಥಿ ಉಪನ್ಯಾಸಕರ ಸಂಖ್ಯೆ | ಗೌರವಧನದ ಅವಧಿ | ಗೌರವಧನದ ಮೊತ್ತ | ಬಾಕಿ ಪಾವತಿಯ ವಿವರಣೆ | ಷರಾ |
|---|---|---|---|---|---|---|
| | | | | | | |

ಮೇಲೆ ನೀಡಿರುವ ಮಾಹಿತಿಯು ಸರಿ ಇದೆ ಎಂದು ಈ ಮೂಲಕ ದೃಡೀಕರಿಸಿದೆ.

ಸಹಿ/-
ಪ್ರಾಂಶುಪಾಲರು